ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು-560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 23.01.2024

# ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

## ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

## (ದಿನಾಂಕ 24-01-2024 ರಿಂದ 28-01-2024 ವರೆಗೆ)

| ನಿಯತಾಂಕಗಳು | 24.01.2024 | 25.01.2024 | 26.01.2024 | 27.01.2024 | 28.01.2024 |
|---|---|---|---|---|---|
| ಮಳೆ (ಮಿ ಮಿ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 31 | 30 | 30 | 30 | 30 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 18 | 17 | 17 | 17 | 17 |
| ಮೋಡ ( ಪ್ರಮಾಣ) | 2 | 2 | 1 | 1 | 1 |
| ಅರ್ದ್ರತೆ 7.20 ಬೆ (ಶೇ) | 81 | 81 | 83 | 83 | 83 |
| ಅರ್ದ್ರತೆ 2.20 ಮ (ಶೇ) | 40 | 40 | 38 | 38 | 38 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 2 | 3 | 4 | 4 | 5 |
| ಗಾಳಿಯ ದಿಕ್ಕು ( ಡಿಗ್ರಿ) | 170 | 150 | 110 | 90 | 110 |

ಭಾರತೀಯ ಹವಾಮಾನ ಇಲಾಖೆಯ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆಯಾಗುವ ಸಾಧ್ಯತೆ ಕಡಿಮೆ ಇದೆ. ದಿನದ ಗರಿಷ್ಠ ಉಷ್ಣಾಂಶ 30.0-31.0$^{o}$ C ಮತ್ತು ಕನಿಷ್ಠ 17.0-18.0$^{o}$ C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **81-83 %** ಇದ್ದು ಮಧ್ಯಾಹ್ನ **38-40 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2-5** ಕಿ.ಮೀ. ವೇಗದಲ್ಲಿ ಬೀಸುವ ಸ೦ಭವವಿದೆ.

**ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ**

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| | | 1. ರೈತ ಬಾಂದವರು ಹಿಂಗಾರು ಬೆಳೆಗಳನ್ನು ಕಟಾವು ಮಾಡಲು ಸೂಕ್ತ ಕಾಲ.<br>2. ರೈತ ಬಾಂದವರು ಕಟಾವು ಮಾಡಿರುವ ಬೆಳೆಗಳನ್ನು ಸ್ವಚ್ಛ ಮಾಡಿ ಒಕ್ಕಣೆ ಮಾಡಿ, ಬಿಸಿಲಿನಲ್ಲಿ ಒಣಗಿಸಿ ಚೀಲದಲ್ಲಿ ಶೇಖರಿಸಿ.<br>3. ಕಟಾವು ಮಾಡಿದ ಬಿತ್ತನೆ ಬೀಜಗಳನ್ನು ಸರಿಯಾಗಿ ಒಣಗಿಸಬೇಕು. ಅಂದರೆ ಏಕದಳ ದಾನ್ಯಗಳು ತೇವಾಂಶ ಶೇ. 11 ರಿಂದ 12, ದ್ವಿದಳದಾನ್ಯಗಳ ತೇವಾಂಶ ಶೇ.9, ಎಣ್ಣೆಕಾಳುಗಳು ಶೇ.8 ಮತ್ತು ತರಕಾರಿ ಬೀಜಗಳು ಶೇ 5 ರಿಂದ 6 ರಷ್ಟಿರಬೇಕು. ಇದರಿಂದ ಹೆಚ್ಚುದಿನ ಕೆಡದಂತೆ ಬೀಜಗಳನ್ನು ಸಂಸ್ಕರಣೆ ಮಾಡಬಹುದು ಜೊತೆಗೆ ಉಗ್ರಾಣ ಕೀಟದ ಬಾಧೆಯನ್ನು ಕಡಿಮೆಮಾಡಬಹುದು.<br>4. ದ್ವಿದಳದಾನ್ಯಗಳನ್ನು ಸಂಸ್ಕರಣಾ ಕೀಟಗಳಿಂದ ರಕ್ಷಿಸಲು ಎಣ್ಣೆಯ ಲೇಪನಮಾಡಿ ಸಂಗ್ರಹಿಸಬೇಕು (ಔಡಲ, ಅಗಸಿ, ಹೊಂಗೆ ಅಥವಾ ಬೇವಿನ ಎಣ್ಣೆ) ಪ್ರತಿ ಕಿ.ಗ್ರಾಂ ಬೀಜಕ್ಕೆ 3 ರಿಂದ 5 ಮಿ.ಲೀ. ಎಣ್ಣೆಯನ್ನು ಉಪಯೋಗಿಸಬೇಕು. |
| ಮಾವು | ಹೂವಿನ ಹಂತ ಮತ್ತು ಕಾಯಿ ಕಚ್ಚುವ ಹಂತ | 1. ಕಳೆದ ಎರಡು ತಿಂಗಳಿನಿಂದ ಶುಷ್ಕ ವಾತಾವರಣವಿರುವುದರಿಂದ ಮಾವು ಬೆಳೆಯಲ್ಲಿ ಬೂದಿರೋಗದ ಸಂಭವ ಹೆಚ್ಚಾಗಿ ಕಂಡುಬಂದಿರುತ್ತದೆ.<br>2. ಕನಿಷ್ಠ ಉಷ್ಣಾಂಶವು 3-4 $^{o}$C ಹಟಾತ್ ಕುಸಿತದಿಂದ ಮಾವಿನ ಹೂವಿನ ಮೇಲೆ ತುಂಬಾ ಪರಿಣಾಮ ಬಿದ್ದು ಹೂವುಗಳು ಉದುರುವುದು ಸರ್ವೇ ಸಾಮಾನ್ಯವಾಗಿದೆ. ಇದರ ಹತೋಟಿಗೆ ಪ್ಯಾಕ್ಲೋಬ್ಯುಟಜಾಲ್ ಅನ್ನು ಸಿಂಪಡಿಸಿ ಇದರಿಂದ ಎಲೆ ಚಿಗುರುವುದು ನಿಲ್ಲುತ್ತದೆ ಮತ್ತೆ ಹೊಸ ಹೂವುಗಳು ಬಿಡಲು ಪ್ರಾರಂಭವಾಗುತ್ತವೆ.<br>3. ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಚ್ಚಿದ ಕೂಡಲೇ ಜಿಗಿಹುಳು ಮತ್ತು ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ 4ಗ್ರಾಂ ಕಾರ್ಬರಿಲ್ (50 wp) ಅಥವಾ 0.3 ಮಿ.ಲೀ ಇಮಿಡಾಕ್ಲೋಪ್ರಿಡ್ 200.ಎಸ್.ಎಲ್ ಅಥವಾ 0.5 ಮಿ.ಲೀ ಲ್ಯಾಂಬ್ಡಾ ಸೈಯೋಲೋಥ್ರಿನ್ (5 ಇಸಿ)<br>4. ಜೊತೆಗೆ 3ಗ್ರಾಂ. ನೀರಿನಲ್ಲಿ ಕರಗುವ ಗಂಧಕ (ಸಲ್ ಟಾಫ್ 80wp) ಪ್ರತಿ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಿ.<br>5. ಜಿಗಿಹುಳುವಿನ ಹಾವಳಿ ತೀವ್ರವಾಗಿದ್ದಲ್ಲಿ ಅಝಾಡಿರೆಕ್ಟಿನ್ (10,000 ಪಿ.ಪಿ.ಎಮ್) 7 ಮಿ.ಲೀ/ಲೀ ನೀರಿನಲ್ಲಿ ಸಿಂಪಡಿಸಿ. |

| | | |
|---|---|---|
| | | 6. ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಚಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತುತೆಗೆಯಬೇಕು.<br>7. ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಚಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತುತೆಗೆಯಬೇಕು. |
| **ಪಶುಸಂಗೋಪನೆ** | | **ಕಾಲುಬಾಯಿ ರೋಗ (ಗೆರಸಲು ರೋಗ) :**ಜ್ವರ ಹೆಚ್ಚಾಗಿ ಬಾಯಿಯಲ್ಲಿ ಗುಳ್ಳೆಗಳು ಕಾಣಿಸಿ, ಇವು ಒಡೆದು ನಾಲಗೆಯ ಮೇಲೆ ಗಾಯಗಳಾಗುತ್ತವೆ.<br>1. ಇದರ ಹತೋಟಿಗೆ ಮಿಶ್ರತಳಿ ದನಗಳಿಗೆ ಪ್ರತಿ ವರ್ಷ ಎರಡು ಬಾರಿ **ಜನವರಿ** ಮತ್ತು ಜುಲೈನಲ್ಲಿ ಲಸಿಕೆ ಹಾಕಿಸುವುದು.<br>2. ನರಳುವ ದನಗಳನ್ನು ಬೇರ್ಪಡಿಸುವುದು.<br>3. ಬಾಯಿ, ಗೊರಸುಗಳನ್ನು ಮತ್ತು ಉಪಕರಣಗಳನ್ನು ಅಡಿಗೆ ಸೋಡಾ ದ್ರಾವಣದಿಂದ ತೊಳೆಯಬೇಕು.<br>4. ಕೊಟ್ಟಿಗೆಯನ್ನು ಕ್ರಿಮಿನಾಶಕ ದ್ರಾವಣದಿಂದ ಶುಚಿ ಮಾಡಬೇಕು.<br>5. ತಾಪಮಾನದಲ್ಲಿ ಹಠಾತ್ ಕುಸಿತದಿಂದ ಪ್ರಾಣಿಗಳನ್ನು ರಕ್ಷಿಸಲು ರಾತ್ರಿಯ ಸಮಯದಲ್ಲಿ ಮುಚ್ಚಿದ ಶೆಡ್ ಪ್ರದೇಶದಲ್ಲಿ ಇರಿಸಿ.<br>6. ಕೆಲವು ಪ್ರದೇಶಗಳಲ್ಲಿ ಚಳಿಗಾಲದ ತಿಂಗಳುಗಳಲ್ಲಿ ಉಂಟಾಗುವ ಕೊರತೆಯ ಅವಧಿಗೆ ಮೇವನ್ನು ಸಂಗ್ರಹಿಸಲು ಸರಿಯಾದ ಕಾಳಜಿ ವಹಿಸಬೇಕು, ಈ ಸಮಯದಲ್ಲಿ ದೀರ್ಘಕಾಲಿಕ ಹುಲ್ಲುಗಳನ್ನು ಕತ್ತರಿಸಬೇಕು. |
| **ಕೋಳಿ ಸಾಕಾಣಿಕಾ** | | 1. ಮೊಟ್ಟೆಯಿಂದ ಮರಿಗಳ ಬಂದ ನಂತರ ಮೊದಲನೇ ವಾರದಲ್ಲಿ ಶಾಖದ ಬುಟ್ಟಿಯ ಕೆಳಗೆ ಬಿಡಬೇಕು ಮತ್ತು ಶಾಖದ ಬುಟ್ಟಿಯ ಅಂಚಿನಲ್ಲಿ ನೆಲಕ್ಕೆ ಹರಡಿರುವ ಸತ್ತೆಯಿಂದ 8 ಸೆ.ಮೀ. ಮೇಲೆ $35^0$ ಸೆ. ಶಾಖ ಇರಬೇಕಾಗುತ್ತದೆ. ಅನಂತರ ವಾರಕ್ಕೆ $2^0$ ಸೆ. ನಂತೆ ಕಡಿಮೆ ಮಾಡಿ, ನಾಲ್ಕು ವಾರಗಳ ನಂತರ ಬಿಸಿ ಬುಟ್ಟಿಗಳನ್ನು ತೆಗೆಯಬೇಕು.<br>2. ಚಳಿಗಾಲವಿರುವುದರಿಂದ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಉಷ್ಣಾಂಶದ ಸ್ಥಿರತೆ ಕಾಪಾಡಲು ವಿದ್ಯುತ್ ಬಲ್ಫ್ ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುತ್ತದೆ.<br>3. ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಕಿಟಕಿಯಲ್ಲಿ ಚಳಿಗಾಳಿಯು ಹೆಚ್ಚಾಗಿ ಬೀಸುವುದರಿಂದ ಪರದೆಯನ್ನು ಮುಚ್ಚಿ ಚಳಿಯಿಂದ ರಕ್ಷಿಸಬೇಕು. |
| **ರೇಷ್ಮೆ ಸಾಕಾಣಿಕೆ** | | 1. **ಸುಣ್ಣ ಕಟ್ಟು ರೋಗ:** ಈ ರೋಗವು ಸಾಮಾನ್ಯವಾಗಿ ಮಳೆಗಾಲ ಮತ್ತು ಚಳಿಗಾಲದಲ್ಲಿ ಕೆಲವು ಶಿಲೀಂಧ್ರಗಳ ಸೋಂಕಿನಿಂದ (ಬ್ಯುವೇರಿಯಾ ಬ್ಯಾಸಿಯಾನಾ) ಬರುತ್ತದೆ.<br>2. ರೋಗವನ್ನು ಯಶಸ್ವಿಯಾಗಿ ನಿಯಂತ್ರಿಸಬೇಕಾದರೆ ಉಷ್ಣಾಂಶ ಮತ್ತು ತೇವಾಂಶವನ್ನು ಶಿಫಾರಸ್ಸು ಮಾಡಿದ ರೀತಿಯಲ್ಲಿ ಕಾಪಾಡಬೇಕು.<br>3. ರೇಷ್ಮೆ ಸಾಕಾಣಿಕಾ ಘಟಕದಲ್ಲಿ ಕನಿಷ್ಠ ಉಷ್ಣಾಂಶವು $22^0$ ಸೆ. ಗಿಂತ ಕಡಿಮೆಯಾದಲ್ಲಿ ರೂಮ್ ಹೀಟರ್‌ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುವ್ಯದು ಅವಶ್ಯಕ.<br>4. ಹಾಸಿಗೆಯನ್ನು ತೆಳುವಾಗಿಟ್ಟು ಹಳೆ ಹಾಸಿಗೆ ಒಣಗುವಂತೆ ಸುಣ್ಣವನ್ನು ಹಂತಕ್ಕೆ ತಕ್ಕಂತೆ ಸರಿ ಪ್ರಮಾಣದಲ್ಲಿ ಧೂಳೀಕರಿಸಿ ನೋಡಿಕೊಳ್ಳಬೇಕು.<br>5. ಬಲೆಯನ್ನು ಬಳಸಿ ಹಾಸಿಗೆಯನ್ನು ಸ್ವಚ್ಚಗೊಳಿಸಬೇಕು ಮತ್ತು ರೋಗಗ್ರಸ್ಥ ಹುಳುಗಳನ್ನು ಆಯ್ದು ಮಣ್ಣಿನಲ್ಲಿ ಹೂತು ಹಾಕಿ ನಾಶಪಡಿಸಬೇಕು. ಸಾಕಾಣಿಕೆ ಮನೆ ಮತ್ತು ಅದರ ಸುತ್ತಲೂ ಶೇ.5ರ ಬ್ಲೀಚಿಂಗ್ ಪುಡಿ ಮತ್ತು ಸುಣ್ಣದ ಮಿಶ್ರಣವನ್ನು (1:19) ಧೂಳೀಕರಿಸಬೇಕು ಹಾಗೂ ವೈಯಕ್ತಿಕ ಶುಭ್ರತೆಯನ್ನು ಕಾಪಾಡಬೇಕು.<br>6. ಕಾಲಕಾಲಕ್ಕೆ ಹಾಸಿಗೆ ಸೋಂಕು ನಿವಾರಕಗಳಾದ ಸುರಕ್ಷ, ವಿಜೇತ, ಅಂಕುಶ್, ಸಂರಕ್ಷಕ ಮುಂತಾದ ಔಷಧಿಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಧೂಳೀಕರಿಸುತ್ತಿರಬೇಕು ಮತ್ತು ರೋಗ ಕಾಣಿಸಿಕೊಂಡಾಗ ಹತೋಟಿ ಬರುವವರೆಗೂ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಸೋಂಕು ನಿವಾರಕಗಳನ್ನು ಬಳಸಬೇಕು. |


**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಫ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.